# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :782 (868)

ಸದಸ್ಯರು ಹೆಸರು :ಶ್ರೀ ಟಿ.ಎನ್. ಜವರಾಯಿ ಗೌಡ

ಉತ್ತರಿಸುವ ದಿನಾಂಕ :11.03.2026

ಉತ್ತರಿಸುವ ಸಚಿವರು :ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 2025 ಸೆಪ್ಟೆಂಬರ್ ತಿಂಗಳ 10ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾದ ಕರ್ನಾಟಕ ಭೂ ಸುಧಾರಣೆಗಳು ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ಅಧಿನಿಯಮ 2025, ಮತ್ತು 1962ರ ಕರ್ನಾಟಕ ಅಧಿನಿಯಮ ಸಂ.10ರ ತಿದ್ದುಪಡಿ:- ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ ಸಂ.10) ಹಾಗೂ 1964ರ ಕರ್ನಾಟಕ ಅಧಿನಿಯಮ ಸಂ:12ರ ತಿದ್ದುಪಡಿ:- ಕರ್ನಾಟಕ ಭೂ ಕಂದಾಯ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 12)ರಲ್ಲಿ ಈ ಅಧಿನಿಯಮಗಳು ಜಾರಿಗೆ ಬಂದಿವೆಯೇ; | ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961 ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ವಿವಿಧ ಕಲಂ ಗಳಿಗೆ 2025ರ ಕರ್ನಾಟಕ ಅಧಿನಿಯಮ ಸಂಖ್ಯೆ:56ರಂತೆ ಈಗಾಗಲೇ ತಿದ್ದುಪಡಿಯನ್ನು ಮಾಡಿ ಸರ್ಕಾರದ ಅಧಿಸೂಚನೆ ಸಂಖ್ಯೆ: DPAL 59 SHASANA 2025 ದಿನಾಂಕ:10.09.2025ರಂತೆ ಕರ್ನಾಟಕ ರಾಜ್ಯ ಪತ್ರದ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸ ಲಾಗಿದ್ದು, ಸದರಿ ಕಾಯ್ದೆಯು ದಿನಾಂಕ: 10.09.2025 ರಿಂದ ಜಾರಿಗೆ ಬಂದಿರುತ್ತದೆ. |
| (ಆ) | ಹಾಗಿದ್ದಲ್ಲಿ, ಈ ಬಗ್ಗೆ ಇನ್ನು ಸರ್ಕಾರದ ಆದೇಶವಾಗದಿರುವುದಕ್ಕೆ ಕಾರಣಗಳೇನು; | |
| (ಇ) | ಆದೇಶವಾಗಿದ್ದಲ್ಲಿ, ಸರ್ಕಾರದ ಆದೇಶ ಪ್ರತಿಗಳನ್ನು ಒದಗಿಸುವುದು; | ಪ್ರತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| (ಈ) | ಆದೇಶವಾಗಿದ್ದಲ್ಲಿ; ವಿಳಂಬಕ್ಕೆ ಕಾರಣವನ್ನು ತಿಳಿಸುವುದು; | ಸದರಿ ತಿದ್ದುಪಡಿಯು ದಿನಾಂಕ: 10.09.2025 ರಿಂದ ಜಾರಿಗೆ ಬಂದಿರುವುದರಿಂದ, ಅದನ್ನು ಜಾರಿಗೊಳಿಸಲು ಯಾವುದೇ ವಿಳಂಬವಾಗಿರುವುದಿಲ್ಲ. |

**ಕಂಇ 8 ಎಲ್‌ಆರ್‌ಎಸ್ 2026**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

Scanned with OKEN Scanner

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ - ೪ಎ<br>Part – IVA | ಬೆಂಗಳೂರು, ಬುಧವಾರ, ೧೦ ಸೆಪ್ಟೆಂಬರ, ೨೦೨೫ (ಭಾದ್ರಪದ ೧೯, ಶಕವರ್ಷ ೧೯೪೭)<br>BENGALURU, WEDNESDAY, 10 SEPTEMBER, 2025 (BHADRAPADA 19, SHAKAVARSHA 1947) | ಸಂ. ೫೬೨<br>No.562 |
|---|---|---|


## PARLIAMENTARY AFFAIRS AND LEGISLATION SECRETARIAT

## NOTIFICATION

## NO: DPAL 59 SHASANA 2025, BENGALURU, DATED:10.09.2025

The Karnataka Land Reforms and Certain other Law (Amendment) Bill, 2025 ಇದಕ್ಕೆ 2025ರ ಸೆಪ್ಟೆಂಬರ್ ತಿಂಗಳ 10ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 56 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IVA) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.-

## KARNATAKA ACT NO. 56 OF 2025

(First Published in the Karnataka Gazette Extra-ordinary on the 10th day of September, 2025)

## THE KARNATAKA LAND REFORMS AND CERTAIN OTHER LAW (AMENDMENT) ACT, 2025

(Received the assent of the Governor on the 10th day of September, 2025)

An Act further to amend the Karnataka Land Reforms Act, 1961 and Karnataka Land Revenue Act, 1964.

Whereas it is expedient further to amend the Karnataka Land Reforms Act, 1961 (Karnataka Act No. 10 of 1962) and the Karnataka Land Revenue Act, 1964 (Karnataka Act 12 of 1964) for the purposes hereinafter appearing,

Be it enacted by the Karnataka State Legislature in the Seventy sixth year of the Republic of India, as follows:-

**1. Short title and commencement.-** (1) This Act may be called the Karnataka Land Reforms and Certain Other Law (Amendment) Act, 2025.

(2) It shall come into force at once.



Scanned with OKEN Scanner

**2. Amendment of Karnataka Act No.10 of 1962.-** In the Karnataka Land Reforms Act, 1961 (Karnataka Act No. 10 of 1962),-

(i) In section 109,-

(a) in sub-section (1A), in the proviso, for the words "half hectare" the words "four hectare" shall be substituted;

(b) in sub-section (2), in the proviso, for the words "by the Government, for sale of the land for the same purpose" the words "by the High Power Committee headed by the Chief Secretary for use or sale of the land for any purpose" shall be substituted.

(ii) In section 124, for the words and figures "sections 193, 219 and 228 of the Indian Penal Code" the words, figures and brackets "sections 229, 257 and 267 of the Bharatiya Nyaya Sanhita, 2023 (Central Act 45 of 2023)", shall be substituted;

(iii) in section 125,-

(a) in sub-section (1), for the table the following shall be substituted, namely:-

**"Table**

| **Section** | **Penalty which may be imposed (Rs.)** |
|---|---|
| Section 12 | 5,000 |
| Section 33 | 2500 |
| Section 41 | 5,000 |
| Section 129 | 1,000 |

"

(b) in sub-section (1-A), for the words "imprisonment which shall be not less than six months but which may extend to one year or with fine which shall be five thousand rupees" the words "with penalty which shall be fifty thousand rupees", shall be substituted.

**3. Amendment of Karnataka Act No.12 of 1964.-** In the Karnataka Land Revenue Act, 1964 (Karnataka Act No. 12 of 1964),-

Scanned with OKEN Scanner

(i) In section 94B, in sub-section (1) for the words "within twenty two years", the words "within twenty six years" shall be and shall always be deemed to have been substituted

(ii) In section 95,-

(a) in sub-section (2), in clause (ii), after the second proviso, the following shall be inserted, namely:-

"Provided also that, no diversion of land for non-agricultural purpose shall be required, if agricultural land upto 2.00 acres is used for establishing new industries".

(b) for sub-section (10), the following shall be substituted, namely:-

"(10) The conversion of land for non-agricultural purpose as required under sub-section (2) is exempted for the land parcels required for establishing Renewable Energy Projects in the state subject to payment of the prescribed fees to the concerned Authorities under sub-section (7)."

(iii) in section 192-A, in the table, for the entries in serial number 5, the following shall be substituted, namely:-

"

| | | |
|---|---|---|
| (5) | Sells any agricultural land for non-agricultural purposes without getting such land converted or without obtaining prior approval of the competent authority.<br><br>Provided that it shall not apply to cases which are regularized by the Government by formulating a special scheme in this behalf. | The penalty of rupees one lakh. |

"

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

Scanned with OKEN Scanner

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 59 ಶಾಸನ 2025, ಬೆಂಗಳೂರು, ದಿನಾಂಕ:10.09.2025.**

The Kannada Language Comprehensive Development Act, 2022 (Karnataka Act No. 13 of 2023)ರ ಪ್ರಕರಣ 6 ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Land Reforms and Certain Other Law (Amendment) Act, 2025 (Karnataka Act No.56 of 2025) ರ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IVA) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 56**

(2025ರ ಸೆಪ್ಟೆಂಬರ್ ತಿಂಗಳ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಭೂ ಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2025**

(2025 ರ ಸೆಪ್ಟೆಂಬರ್ ತಿಂಗಳ 10ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ ಸಂ. 10) ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

2. **1962ರ ಕರ್ನಾಟಕ ಅಧಿನಿಯಮ ಸಂ.10ರ ತಿದ್ದುಪಡಿ.**- ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ ಸಂ. 10)ರಲ್ಲಿನ,-

(i) 109ನೇ ಪ್ರಕರಣದಲ್ಲಿ,-

(ಎ) ಉಪ-ಪ್ರಕರಣ (1ಎ)ರಲ್ಲಿನ ಪರಂತುಕದಲ್ಲಿ, "ಅರ್ಧ ಹೆಕ್ಟೇರ್" ಎಂಬ ಪದಗಳ ಬದಲಿಗೆ "ನಾಲ್ಕು ಹೆಕ್ಟೇರ್" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

Scanned with OKEN Scanner

(ಬಿ) ಉಪ-ಪ್ರಕರಣ (2)ರಲ್ಲಿನ ಪರಂತುಕದಲ್ಲಿ "ಸರ್ಕಾರವು ಅನುಮತಿಸಿದ ಮೇರಗೆ ಅದೇ ಉದ್ದೇಶಕ್ಕಾಗಿ ಭೂಮಿಯನ್ನು ಮಾರಾಟ ಮಾಡಬಹುದು" ಎಂಬ ಪದಗಳ ಬದಲಿಗೆ "ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿನ ಉನ್ನತಾಧಿಕಾರ ಸಮಿತಿಯು ಅನುಮತಿಸಿದ ಮೇರೆಗೆ ಯಾವುದೇ ಉದ್ದೇಶಕ್ಕಾಗಿ ಭೂಮಿಯ ಬಳಕೆ ಅಥವಾ ಮಾರಾಟ ಮಾಡಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) 124ನೇ ಪ್ರಕರಣದಲ್ಲಿ, "ಭಾರತ ದಂಡ ಸಂಹಿತೆಯ 193, 219 ಮತ್ತು 228ನೇ ಪ್ರಕರಣಗಳ" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ "ಭಾರತ ನ್ಯಾಯ ಸಂಹಿತೆ, 2023ರ 229,257 ಮತ್ತು 267ನೇ ಪ್ರಕರಣಗಳ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು;

(iii) 125ನೇ ಪ್ರಕರಣದಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿನ ಕೋಷ್ಟಕದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಕೋಷ್ಟಕ

| ಪ್ರಕರಣ | ವಿಧಿಸಬಹುದಾದ ದಂಡನೆ (ರೂ.) |
| --- | --- |
| ಪ್ರಕರಣ 12 | 5,000 |
| ಪ್ರಕರಣ 33 | 2,500 |
| ಪ್ರಕರಣ 41 | 5,000 |
| ಪ್ರಕರಣ 129 | 1,000 |

(ಬಿ) ಉಪ-ಪ್ರಕರಣ (1ಎ) ರಲ್ಲಿ "ಆರು ತಿಂಗಳುಗಳಿಗಿಂತ ಕಡಿಮೆಯಿರದಂಥ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂತ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಐವತ್ತು ಸಾವಿರ ರೂಪಾಯಿಗಳ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

**3. 1964ರ ಕರ್ನಾಟಕ ಅಧಿನಿಯಮ ಸಂ.12ರ ತಿದ್ದುಪಡಿ.**- ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರಲ್ಲಿ,-

(i) 94ಬಿ ಪ್ರಕರಣದ ಉಪ-ಪ್ರಕರಣ (1)ರಲ್ಲಿ "ಇಪ್ಪತ್ತೆರಡು ವರ್ಷಗಳೊಳಗೆ" ಎಂಬ ಪದಗಳ ಬದಲಿಗೆ "ಇಪ್ಪತ್ತಾರು ವರ್ಷಗಳೊಳಗೆ" ಎಂಬ ಪದಗಳನ್ನು ಯಾವಾಗಿನಿಂದಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು;

(ii) 95ನೇ ಪ್ರಕರಣದಲ್ಲಿ,-

(ಎ) ಉಪ-ಪ್ರಕರಣ (2)ರ ಖಂಡ (iii)ರಲ್ಲಿನ ಎರಡನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ

Scanned with OKEN Scanner

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



"ಪರಂತು ಹೊಸ ಉದ್ಯಮಗಳನ್ನು ಸ್ಥಾಪಿಸುವುದಕ್ಕಾಗಿ 2.00 ಎಕರೆಗಳವರೆಗೆ ಕೃಷಿ ಭೂಮಿಯನ್ನು ಬಳಸಿದಲ್ಲಿ, ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯನ್ನು ಬದಲಾಯಿಸುವುದು ಅಗತ್ಯವಿರತಕ್ಕದ್ದಲ್ಲ."

(ಬಿ) ಉಪ-ಪ್ರಕರಣ (10)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(10) ಉಪ-ಪ್ರಕರಣ (2)ರಡಿಯಲ್ಲಿ ಅಗತ್ಯಪಡಿಸಲಾದಂತೆ ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯ ಪರಿವರ್ತನೆಯನ್ನು, ಉಪ-ಪ್ರಕರಣ (7)ರಡಿಯಲ್ಲಿ ಸಂಬಂದಪಟ್ಟ ಪ್ರಾಧಿಕಾರಗಳಿಗೆ ನಿಯಮಿಸಲಾದ ಶುಲ್ಕಗಳ ಪಾವತಿಗೊಳಪಟ್ಟು, ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಸ್ಥಾಪಿಸಲು ಅಗತ್ಯವಿರುವ ಭೂ ಭಾಗಗಳಿಗೆ ವಿನಾಯಿತಿಸತಕ್ಕದ್ದು."

(iii) 192-ಎ ಪ್ರಕರಣದಲ್ಲಿನ ಕೋಷ್ಟಕದ 5ನೇ ಕ್ರಮ ಸಂಖ್ಯೆಯಲ್ಲಿನ ನಮೂದುಗಳ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"

| | | |
|---|---|---|
| 5 | ಕೃಷಿಯೇತರ ಉದ್ದೇಶಕ್ಕಾಗಿ ಯಾವುದೇ ಕೃಷಿ ಭೂಮಿಯನ್ನು ಸಕ್ರಮ ಪ್ರಾಧಿಕಾರದಿಂದ ಪರಿವರ್ತನೆಗೊಳಿಸಿಕೊಳ್ಳದಯೇ ಅಥವಾ ಮುಂಚಿತವಾಗಿ ಅನುಮೋದನೆ ಪಡೆಯದೆಯೇ ಮಾರಾಟ ಮಾಡಿದರೆ:<br>ಪರಂತು, ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವುದರ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | ಒಂದು ಲಕ್ಷ ರೂಪಾಯಿಗಳ ದಂಡ |

The above translation of the Karnataka Land Reforms and Certain Other Law (Amendment) Act, 2025 (Karnataka Act No. 56 of 2025) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH

Scanned with OKEN Scanner

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೬೧<br>Volume - 161 | ಬೆಂಗಳೂರು, ಗುರುವಾರ, ೦೫, ಫೆಬ್ರವರಿ, ೨೦೨೬(ಮಾಘ, ೧೬, ಶಕವರ್ಷ, ೧೯೪೭)<br>BENGALURU, THURSDAY, 05, FEBRUARY, 2026(MAGHA, 16, SHAKAVARSHA, 1947) | ಸಂಚಿಕೆ ೨೪<br>Issue 24 |
|---|---|---|

## ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

## ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 658 ಬಿಎಂಆರ್ 2025 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
4ನೇ ಮಹಡಿ, ವಿಕಾಸ ಸೌಧ,
ಡಾ|| ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 28-01-2026.

### ಅಧಿಸೂಚನೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 4-ಸಿ(3)(i) ಮತ್ತು (iv) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಹಿಂದೆ ಮಾಗಡಿ ಯೋಜನಾ ಪ್ರಾಧಿಕಾರಕ್ಕೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡಲಾಗಿದ್ದ ಅಧಿಸೂಚನೆ ಸಂಖ್ಯೆ: ನಅಇ 35 ಬಿಎಂಆರ್ 2024(ಇ), ದಿನಾಂಕ:07.03.2024 (ಅಧಿಸೂಚನೆ-II)ನ್ನು ಹಿಂಪಡೆದು, ಸದರಿ ಯೋಜನಾ ಪ್ರಾಧಿಕಾರಕ್ಕೆ ಈ ಕೆಳಕಂಡವರನ್ನು ಅಧ್ಯಕ್ಷರು ಮತ್ತು ಸದಸ್ಯರುಗಳನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಿ ಆದೇಶಿಸಿದೆ.

| ಕ್ರ. ಸಂ. | ಸದಸ್ಯರ ವಿವರ | ಹುದ್ದೆ |
|---|---|---|
| 1. | ಶ್ರೀ ಪ್ರಕಾಶ್ ಬಿನ್ ಮಾಗಡಯ್ಯ, ತಟವಾಳು ಕಾಲೋನಿ, ತಟವಾಳು, ಕಸಬಾ ಹೋಬಳಿ, ಮಾಗಡಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. | ಅಧ್ಯಕ್ಷರು |
| 2. | ಶ್ರೀ ಆರ್ ಕೃಷ್ಣಪ್ಪ ಬಿನ್ ರೇವಣ್ಣ,ವಾರ್ಡ್ ನಂ 15, ಮಾರುತಿ ಚಿತ್ರಮಂದಿರದ ಹಿಂಭಾಗ, ಮಾಗಡಿ ಟೌನ್, ಮಾಗಡಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. | ಸದಸ್ಯರು |



e No. RD/85/LRA/2025-SO LR-REVENUE DEPATMENT SEC (Computer No. 1749636)
enerated from eOffice by MANJULA.K, RD-SO-LR(MK), SECTION OFFICER, REVENUE DEPARTMENT SEC on 25/02/2026 11:48 AM

Scanned with OKEN Scanner

| | | |
|---|---|---|
| 3 | ಶ್ರೀ ಚಂದ್ರಶೇಖರ್ ಬಿ.ಎನ್, ಬಿನ್ ನಾಗರಾಜ ಗುಪ್ತ ಬಿ.ಎಲ್. ನಂ 540/599, 19ನೇ ವಾರ್ಡ್, ಕೆರೆ ಬೀದಿ, ಮಾಗಡಿ ಟೌನ್, ಮಾಗಡಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. | ಸದಸ್ಯರು |
| 4 | ಶ್ರೀ ದೀಪಕ್ ಕೆ.ಯು ಬಿನ್ ಉದೀಶ್ ಕೆ.ಜಿ.ಕಾಗಿಮಡು ಗ್ರಾಮ, ಕುದೂರು ಹೋಬಳಿ, ಮಾಗಡಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. | ಸದಸ್ಯರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಶ್ ಎಸ್. ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ(ಬಿಡಿಎ & ಬೆಂ-1).

**PR-91**

**GOVERNMENT OF KARNATAKA**

No. RD 85 LRA 2025
(E-1749636)

Karnataka Government Secretariat,
M.S.Building,
Dr. B.R. Ambedkar Veedhi,
Bengaluru, Dated: 03.02.2026.

**NOTIFICATION**

The draft of the following rules further to amend the Karnataka Land Reforms Rules, 1974, was published as required in section 137 of the Karnataka Land Reforms Act, 1961 (Karnataka Act 10 of 1962), vide Notification No. RD 85 LRA 2025, Dated : 09.01.2026, in Part IV-A, No. 57 of the Karnataka Gazette dated 12.01.2026 inviting objections or suggestions from all the persons likely to be affected thereby within fifteen days from the date of its publication in the Official Gazette.

Whereas, the said Gazette was made available to the public on 12.01.2026.

And whereas objections and suggestions received in this regard have been considered by the State Government.

Now therefore, in exercise of the powers conferred by section 137 of the Karnataka Land Reforms Act, 1961 (Karnataka Act 10 of 1962) the Government of Karnataka hereby makes the following rules, namely.

**RULES**

**1. Title and commencement.-** (1) These rules may be called the Karnataka Land Reforms (Amendment) Rules, 2025.



File No. RD/85/LRA/2025-SO LR-REVENUE DEPATMENT SEC (Computer No. 1749636)
Generated from eOffice by MANJULA.K, RD-SO-LR(MK), SECTION OFFICER, REVENUE DEPARTMENT SEC on 25/02/2026 11:48 AM

Scanned with OKEN Scanner

(2) They shall come into force from the date of their final publication in the Official Gazette.

**2. Amendment of rule 38-D.-** In the Karnataka Land Reforms Rules, 1974, (hereinafter referred to as the said rules), in rule 38-D,-

(i) for sub-rule (2-A), the following shall be substituted, namely:-

"(2-A). The Deputy commissioner shall scrutinise, the applications made in Form-15A, in Form-15B and report of Tahasildar called for under sub-rule(2), after following the procedure specified in Rule 38-B, and shall approve or reject such applications for the lands up to four hectares:

Provided that, all such proposals of Deputy Commissioner of Bengaluru Urban District and Bengaluru Rural District and proposals of other districts involving lands exceeding four hectares, shall be forwarded by the Deputy Commissioner to the Government in Form 15-C for placing the same before the High Power Committee under the Chairmanship of the Chief Secretary to the Government of Karnataka, after following the procedure specified in rule 38-B."

(ii) after sub-rule (2-A), the following shall be inserted, namely:-

"(2-B). There shall be a High Power Committee under the Chairmanship of the Chief Secretary to the Government of Karnataka with the following members namely:-

a. Secretary/Principal Secretary/Additional Chief Secretary to Government, Revenue Department;
b. Secretary/Principal Secretary/Additional Chief Secretary to Government, Commerce and Industries Department;
c. Secretary/Principal Secretary/Additional Chief Secretary to Government, Education Department;
d. Secretary/Principal Secretary/Additional Chief Secretary to Government, Horticulture Department;
e. Secretary/Principal Secretary/Additional Chief Secretary to Government, Urban Development, and;
f. Such other Secretaries to Government or any other officers of Government as the Chairman may deem fit."

**3. Substitution of Form 15-C,-** In the said rules, for Form-15C and entries relating thereunder the following shall be substituted, namely:-



e No. RD/85/LRA/2025-SO LR-REVENUE DEPATMENT SEC (Computer No. 1749636)
nerated from eOffice by MANJULA.K, RD-SO-LR(MK), SECTION OFFICER, REVENUE DEPARTMENT SEC on 25/02/2026 11:48 AM

Scanned with OKEN Scanner

RD 85 LRA 2 (E-1749636)

"Form 15-C

(See sub-rule(2-A) of rule 38-D)
Application for claiming / granting exemption under Section 109 of the Karnataka Land Reforms Act, 1961
(To be filled by the Deputy Commissioner)

| | | |
|---|---|---|
| 1. | Name of the Applicant / Institution with detailed address (in block letters) | |
| 2 | Survey No.<br>Extent of Land in ________ Acres<br>Village__________ Hobli__________ Taluk________<br>District______ | |
| 3. | Purposes for which exemption is sought. | |
| 4. | Date of Registration of firm / Institution under the Companies Act, 2013 (Central Act 18 of 2013) / the Karnataka Societies Registration Act, 1960 (Karnataka Act No. 17 of 1960) / any other Law for time being in force. | |
| 5. | (a). Whether the Registration Certificate issued by the Department of Industries and Commerce for having registered as an industry / I.E.M (Industrial Entrepreneur Memorandum) is enclosed.<br>(b). In case of education Institution whether the recognition letter / order issued by the State or Central Government is enclosed.<br>(c). In case of place of worship whether the notification issued by the Government is enclosed. | |
| 6. | Whether the proposed land comes under the non-alienation clause under:<br>(1) The Karnataka Land Reforms Act, 1961;<br>(2) Any Inams Abolition Act;<br>(3) The Karnataka Land Grant Rules, 1969; or<br>(4) The Karnataka Scheduled Castes and Scheduled Tribes (Prohibition of Transfer of Certain Lands) Act, 1978 (if permission is obtain from Competent Authority attested copy to be enclosed) | |
| 7. | Name of and address of the proposed seller of the land (Survey number wise):<br>(a) When and how the land now propose to be sold was obtained:<br>(i) Inherited<br>(ii) Purchased<br>(iii) Granted<br>(iv) Others (Give three previous transactions if any) | |
| 8. | Whether the land is in irrigated area ? | |
| 9. | Opinion of the Deputy Commissioner | |

Place :
Date :

Signature of the
Deputy Commissioner "

By order in the name of the
Governor of Karnataka

**(RAJENDER KUMAR KATARIA)**
Additional Chief Secretary to Government,
Revenue Department

PR-92



File No. RD/85/LRA/2025-SO LR-REVENUE DEPATMENT SEC (Computer No. 1749636)
Generated from eOffice by MANJULA.K, RD-SO-LR(MK), SECTION OFFICER, REVENUE DEPARTMENT SEC on 25/02/2026 11:46 AM

Scanned with OKEN Scanner

**ಕರ್ನಾಟಕ ಸರ್ಕಾರ**

ಸಂಖ್ಯೆ: RD 85 LRA 2025
(E-1749636)

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 03.02.2025.

**ಅಧಿಸೂಚನೆ**

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10)ರ 137ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಭೂ ಸುಧಾರಣೆಗಳ ನಿಯಮಗಳು, 1974ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳ ಕರಡನ್ನು ದಿನಾಂಕ 09.01.2026ರ ಕರ್ನಾಟಕ ರಾಜ್ಯಪತ್ರ ಸಂಖ್ಯೆ. 57ರ ಭಾಗ IV-A ರಲ್ಲಿ ಅಧಿಸೂಚನೆ ಸಂಖ್ಯೆ: RD 85 LRA 2025, ದಿನಾಂಕ 12.01.2026 ರಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡು ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಆಕ್ಷೇಪಣೆ ಅಥವಾ ಸಲಹೆಗಳನ್ನು ಆಹ್ವಾನಿಸಿರುವುದರಿಂದ;

ಮತ್ತು ದಿನಾಂಕ 12.01.2026 ರಂದು ಸದರಿ ರಾಜ್ಯಪತ್ರವು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಸ್ವೀಕೃತವಾದ ಆಕ್ಷೇಪಣೆ ಅಥವಾ ಸಲಹೆಗಳನ್ನು ಪರಿಗಣಿಸಿರುವುದರಿಂದ;

ಈಗ, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10) ರ 137ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**ನಿಯಮಗಳು**

1. **ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 38-ಡಿ ಯ ತಿದ್ದುಪಡಿ.-** ಕರ್ನಾಟಕ ಭೂ ಸುಧಾರಣೆಗಳ ನಿಯಮಗಳು, 1974 ರಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), ನಿಯಮ 38-ಡಿ ಯಲ್ಲಿ,-



ile No. RD/85/LRA/2025-SO LR-REVENUE DEPATMENT SEC (Computer No. 1749636)
enerated from eOffice by MANJULA.K, RD-SO-LR(MK), SECTION OFFICER, REVENUE DEPARTMENT SEC on 25/02/2026 11:48 AM

Scanned with OKEN Scanner

(i) ಉಪ-ನಿಯಮ (2-ಎ)ಗೆ ಬದಲಾಗಿ, ಈ ಮುಂದಿನದನ್ನು, ಪ್ರತ್ಯಾಯೋಜಿಸತಕ್ಕದ್ದು, ಎಂದರೆ

"(2-ಎ). ಜಿಲ್ಲಾಧಿಕಾರಿಯು, ನಮೂನೆ-15ಎ, ನಮೂನೆ-15ಬಿ ಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ಮತ್ತು (2)ನೇ ಉಪ-ನಿಯಮದ ಮೇರೆಗೆ ಕರೆಯಲಾದ ತಹಶೀಲ್ದಾರವರ ವರದಿಯನ್ನು ಪರಿಶೀಲಿಸಿ, 38-ಬಿ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಕಾರ್ಯವಿಧಾನವನ್ನು ಅನುಸರಿಸಿದ ನಂತರ ನಾಲ್ಕು ಹೆಕ್ಟೇರುಗಳವರೆಗಿನ ಜಮೀನುಗಳಿಗೆ ಸಂಬಂಧಿಸಿದಂತೆ ಅಂಥ ಅರ್ಜಿಗಳನ್ನು ಅನುಮೋದಿಸತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು:

ಪರಂತು, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಯ ಎಲ್ಲಾ ಅಂಥ ಪ್ರಸ್ತಾವಗಳನ್ನು ಮತ್ತು ನಾಲ್ಕು ಹೆಕ್ಟೇರುಗಳಿಗಿಂತ ಹೆಚ್ಚು ಜಮೀನುಗಳನ್ನು ಹೊಂದಿರುವ ಇತರ ಜಿಲ್ಲೆಗಳ ಪ್ರಸ್ತಾವಗಳನ್ನು, ಜಿಲ್ಲಾಧಿಕಾರಿಯು 38-ಬಿ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಕಾರ್ಯವಿಧಾನವನ್ನು ಅನುಸರಿಸಿದ ನಂತರ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿನ ಉನ್ನತಾಧಿಕಾರ ಸಮಿತಿಯ ಮುಂದೆ ಅದನ್ನು ಇಡುವ ಸಲುವಾಗಿ ನಮೂನೆ-15-ಸಿ ರಲ್ಲಿ ಸರ್ಕಾರಕ್ಕೆ ಕಳುಹಿಸತಕ್ಕದ್ದು."

(ii) ಉಪ-ನಿಯಮ (2-ಎ)ಯ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"(2-ಬಿ).** ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಈ ಮುಂದಿನ ಸದಸ್ಯರುಗಳಿರುವ ಉನ್ನತಾಧಿಕಾರದ ಸಮಿತಿಯು ಇರತಕ್ಕದ್ದು:-

(ಎ) ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ;

(ಬಿ) ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ;

(ಸಿ) ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ;

(ಡಿ) ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ;

(ಇ) ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ;

(ಎಫ್) ಸರ್ಕಾರದ ಇತರ ಕಾರ್ಯದರ್ಶಿಗಳು ಅಥವಾ ಅಧ್ಯಕ್ಷರು ಸೂಕ್ತವೆಂದು ಭಾವಿಸಬಹುದಾದ ಯಾವುದೇ ಇತರ ಸರ್ಕಾರಿ ಅಧಿಕಾರಿಗಳು."

**3. ನಮೂನೆ 15-ಸಿ ಯ ಪ್ರತ್ಯಾಯೋಜನೆ.-** ಸದರಿ ನಿಯಮಗಳಲ್ಲಿ, 15ಸಿ ನಮೂನೆ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-



RD/85/LRA/2025-SO LR-REVENUE DEPATMENT SEC (Computer No. 1749636)
File No. RD/85/LRA/2025-SO LR-REVENUE DEPATMENT SEC (Computer No. 1749636)
Generated from eOffice by MANJULA K, RD-SO-LR(MK), SECTION OFFICER, REVENUE DEPARTMENT SEC on 25/02/2026 11:48 AM
Scanned with OKEN Scanner

## "ನಮೂನೆ 15-ಸಿ

(ನಿಯಮ 38-ಡಿ ಯ ಉಪ-ನಿಯಮ (2-ಎ)ಅನ್ನು ನೋಡಿ)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ ಪ್ರಕರಣ 109ರ ಅಡಿಯಲ್ಲಿ ವಿನಾಯಿತಿ ಕೋರುವುದಕ್ಕಾಗಿ/ನೀಡುವುದಕ್ಕಾಗಿ ಅರ್ಜಿ

(ಜಿಲ್ಲಾಧಿಕಾರಿಯು ಭರ್ತಿ ಮಾಡಬೇಕಾದುದು)

| | | |
|---|---|---|
| 1. | ಸವಿವರವಾದ ವಿಳಾಸದೊಂದಿಗೆ ಅರ್ಜಿದಾರ/ಸಂಸ್ಥೆಯ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2. | ಸರ್ವೆ ನಂ.<br>------- ಎಕರೆಗಳಲ್ಲಿ ಜಮೀನಿನ ವಿಸ್ತೀರ್ಣ<br>ಗ್ರಾಮ------ ಹೋಬಳಿ------ ತಾಲ್ಲೂಕು----- ಜಿಲ್ಲೆ------ | |
| 3. | ವಿನಾಯಿತಿ ಕೋರಿರುವುದರ ಉದ್ದೇಶಗಳು | |
| 4. | ಕಂಪನಿಗಳ ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ 18)/ ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ ಸಂಖ್ಯೆ 17) / ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಫರ್ಮು/ಸಂಸ್ಥೆಯ ನೋಂದಣಿ ದಿನಾಂಕ. | |
| 5. | (ಎ). ಕೈಗಾರಿಕೆ/ಐ.ಇ.ಎಂ (ಕೈಗಾರಿಕಾ ವಾಣಿಜೋದ್ಯಮ ಜ್ಞಾಪನಪತ್ರ) ಎಂದು ನೋಂದಾಯಿಸಿ ಕೊಂಡಿರುವುದಕ್ಕಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ನೀಡಲಾದ ನೋಂದಣಿ ಪ್ರಮಾಣಪತ್ರವನ್ನು ಲಗತ್ತಿಸಲಾಗಿದೆಯೇ.<br>(ಬಿ). ಶಿಕ್ಷಣ ಸಂಸ್ಥೆಯಾಗಿದ್ದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರವು ನೀಡಲಾದ ಮಾನ್ಯತೆ ಪತ್ರ/ಆದೇಶವನ್ನು ಲಗತ್ತಿಸಲಾಗಿದೆಯೇ<br>(ಸಿ). ಪೂಜಾ ಸ್ಥಳವಾಗಿದ್ದ ಸಂದರ್ಭದಲ್ಲಿ ಸರ್ಕಾರವು ಹೊರಡಿಸಲಾದ ಅಧಿಸೂಚನೆಯನ್ನು ಲಗತ್ತಿಸಲಾಗಿದೆಯೇ. | |
| 6. | ಪ್ರಸ್ತಾವಿತ ಜಮೀನು ಪರಭಾರೆ ಮಾಡಲಾಗದ ಪರತ್ತಿನ ಅಡಿಯಲ್ಲಿ ಬರುತ್ತದೆಯೇ:<br>ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961;<br>1. ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ;<br>2. ಯಾವುದೇ ಇನಾಮುಗಳ ರದ್ದಿಯಾತಿ ಅಧಿನಿಯಮ;<br>3. ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969; ಅಥವಾ<br>4. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978 (ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದಿದ್ದರೆ ದೃಢೀಕೃತ ಪ್ರತಿಯನ್ನು ಲಗತ್ತಿಸುವುದು) | |



le No. RD/85/LRA/2025-SO LR-REVENUE DEPATMENT SEC (Computer No. 1749636)
enerated from eOffice by MANJULA.K, RD-SO-LR(MK), SECTION OFFICER, REVENUE DEPARTMENT SEC on 25/02/2026 11:48 AM

Scanned with OKEN Scanner

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | |
|---|---|---|
| 7 | ಪ್ರಸ್ತಾವಿತ ಜಮೀನಿನ ಮಾರಾಟಗಾರನ ಹೆಸರು ಮತ್ತು ವಿಳಾಸ (ಸರ್ವೆ ನಂಬರುವಾರು);<br>(ಎ) ಈಗ ಮಾರಾಟ ಮಾಡಲು ಉದ್ದೇಶಿಸಿರುವ ಜಮೀನನ್ನು ಯಾವಾಗ ಮತ್ತು ಹೇಗೆ ಪಡೆಯಲಾಗಿತ್ತು:<br><br>(i) ಅನುವಂಶಿಕವಾದುದು<br>(ii) ಖರೀದಿಸಲಾದುದು<br>(iii) ಅನುದಾನ ನೀಡಲಾದುದು<br>(iv) ಇತರೆ (ಯಾವುದಾದರೂ ಮೂರು ಪೂರ್ವ ವಹಿವಾಟುಗಳಿದ್ದರೆ ನೀಡುವುದು) | |
| 8. | ಜಮೀನು ನೀರಾವರಿ ಪ್ರದೇಶದಲ್ಲಿದೆಯೇ? | |
| 9. | ಜಿಲ್ಲಾಧಿಕಾರಿಗಳ ಅಭಿಪ್ರಾಯ | |

ಸ್ಥಳ:
ದಿನಾಂಕ:

ಜಿಲ್ಲಾಧಿಕಾರಿಗಳ ಸಹಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಂದಾಯ ಇಲಾಖೆ.

**PR-93**

ಮುದ್ರಕರು ಹಾಗೂ ಪ್ರಕಾಶಕರು- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH



File No. RD/85/LRA/2025-SO LR-REVENUE DEPATMENT SEC (Computer No. 1749636)
Generated from eOffice by MANJULA.K. RD-SO-LR(MK), SECTION OFFICER, REVENUE DEPARTMENT SEC on 25/02/2026 11:48 AM

Scanned with OKEN Scanner

(2) The Specified Authority shall, upon receipt of an appeal, give the aggrieved person an opportunity of being heard and shall thereafter dispose of the appeal by,-

i. issuing suitable directions to the Competent Authority; or
ii. rejecting the appeal.

(3) The decision of the Specified Authority shall be final."

By order and in the name
of Governor of Karnataka

**(PRADEEP KUMAR B S)**
Under Secretary to Government,
Health and Family Welfare Department.
(Services)

**PR-163**

**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ: RD 85 LRA 2025
(E-1749636)

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 16.02.2026.

**<u>ತಿದ್ದೋಲೆ</u>**

ಕರ್ನಾಟಕ ರಾಜ್ಯ ಪತ್ರದ ಸಂಪುಟ 161, ಸಂಚಿಕೆ 24, ಭಾಗ-4ಎ ರಲ್ಲಿ ಪ್ರಕಟವಾಗಿರುವ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ನಿಯಮಗಳು, 2025ರ ಕನ್ನಡ ಆವೃತಿಯ ಅಧಿಸೂಚನೆ ಸಂಖ್ಯೆ: RD 85 LRA 2025 (E-1749636), ದಿನಾಂಕ: 03.02.2025ರ ದಿನಾಂಕವನ್ನು 03.02.2026 ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಮಹಾಂತಯ್ಯ ಎಸ್. ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-1)

**PR-164**



le No. RD/85/LRA/2025-SO LR-REVENUE DEPATMENT SEC (Computer No. 1749636)
enerated from eOffice by MANJULA.K, RD-SO-LR(MK), SECTION OFFICER, REVENUE DEPARTMENT SEC on 25/02/2026 11:49 AM

Scanned with OKEN Scanner